| 26. | ಪ್ರೊ. ಪಿ. ಪರಮಶಿವಯ್ಯ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 13.12.2022ರ ಮಂಗಳವಾರ ಅಪರಾಹ್ನ 3:00 ಗಂಟೆಗೆ ಆನ್‌ಲೈನ್ ಮೂಲಕ ನಡೆದ 2021–22ನೇ ಸಾಲಿನ ಮೂರನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯ ಬಗ್ಗೆ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಯಿತು.

| ಕ್ರ ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | ಸಿಬ್ಬಂದಿ ವಿಭಾಗ | |
| 1. | 2021–22/ವಿ.ವಿ.ಪ:3/ ಸಿಬ್ಬಂದಿ–1 | ಯು.ಜಿ.ಸಿ. 2018ರ ನಿಯಮಾವಳಿಗಳ ಆಧಾರದ ಮೇಲೆ ಸರ್ಕಾರದ ವತಿಯಿಂದ ರಚಿಸಿ ಸಲ್ಲಿಸಿರುವ ಪರಿನಿಯಮದ ಕುರಿತು. | ಯು.ಜಿ.ಸಿ. 2018ರ ನಿಯಮಾವಳಿಯ ಅನುಮೋದನೆ ಸಂಬಂಧ ದಿನಾಂಕ 27.08.2022ರಂದು ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗೆ ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆ ಕುರಿತಾಗಿ ಸರ್ಕಾರದ ಪತ್ರ ಸಂಖ್ಯೆ ಇ–ಕಚೇರಿ:ಸಂ:ಇಡಿ 489 ಯುಬಿವಿ 2022ರ ದಿನಾಂಕ 08.12.2022ರಲ್ಲಿ ಪರಿಷ್ಕರಿಸಿರುವ ಸದರಿ ಪರಿನಿಯಮಾವಳಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಶಾಸನಬದ್ಧ ಅಧಿಕಾರಿಗಳ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿರುವ ವಿಷಯ ಹಾಗೂ ಪರಿಷ್ಕೃತ ಪರಿನಿಯಮಾವಳಿಯ ಕುರಿತು ಕೂಲಂಕಷವಾಗಿ ಪರಿಶೀಲಿಸಿ ಚರ್ಚಿಸಿದ ಸಭೆಯು ಪರಿಷ್ಕೃತ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಬೇಕಿರುವ ಹಿನ್ನೆಲೆಯಲ್ಲಿ ಸದರಿ ಪರಿನಿಯಮಾವಳಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |

ಮಾನ್ಯ ಕುಲಸಚಿವರು (ಪ್ರಭಾರ)

ಮಾನ್ಯ ಕುಲಪತಿಗಳು

| ವಿಷಯ ಸಂಖ್ಯೆ | 2022-23:. ಸಾ.ವಿ.ಪ.-01 ಪ.ವಿ.:01 ದಿ.:19.01.2023 |
|---|---|

**ವಿಷಯ: ಡಿ.ಲಿಟ್./ಡಿ.ಎಸ್ಸಿ. ಪದವಿಗಾಗಿ ಮಹಾಪ್ರಬಂಧಗಳನ್ನು ಸಲ್ಲಿಸುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕವನ್ನು ಪರಿಷ್ಕರಿಸುವ ಕುರಿತು.**

* * * * *

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಡಿ.ಲಿಟ್./ಡಿ.ಎಸ್ಸಿ. ಪದವಿಗಾಗಿ ಮಹಾಪ್ರಬಂಧಗಳನ್ನು ಸಲ್ಲಿಸುವ ಅಭ್ಯರ್ಥಿಗಳಿಗೆ ಪ್ರಸ್ತುತ ರೂ. 1,05,000-00 ಗಳನ್ನು ನಿಗಧಿಪಡಿಸಲಾಗಿದೆ. ಈ ಸಂಬಂಧ ದಿನಾಂಕ 17.12.2022 ರಂದು ಮಾನ್ಯ ಕುಲಸಚಿವರು(ಪರೀಕ್ಷಾಂಗ) ರವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲಾ ನಿಕಾಯದ ಡೀನರ ಸಭೆಯಲ್ಲಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಅರ್ಜಿ ಶುಲ್ಕವನ್ನು ರೂ. 1,05,000-00 ಗಳಿಂದ ರೂ. 2,10,000-00 ಗಳಿಗೆ ಹೆಚ್ಚಿಸಲು ಶಿಫಾರಸ್ಸು ಮಾಡಿದ್ದು, ಈ ವಿಷಯವನ್ನು **ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ** ಮುಂದೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| ವಿಷಯ ಸಂಖ್ಯೆ: | 2022-23:.ಸಾ.ವಿ.ವಿ.ಪ:01:ಪ.ವಿ.:02:ದಿ.:17.01.2023 |
|---|---|

**ವಿಷಯ : ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ಹಾಗೂ ಪರೀಕ್ಷಾ ಲೋಪದೋಷಗಳಿಗೆ ಸಂಬಂಧಿಸಿದಂತೆ ಅಧ್ಯಾಪಕರನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು ಸದರಿ ಸಭೆಯ ನಡಾವಳಿಗಳ ಕುರಿತು.**

**ಉಲ್ಲೇಖ : ದಿನಾಂಕ : 05.01.2023 ರಂದು ನಡೆದ** ಪರೀಕ್ಷಾ ಲೋಪದೋಷ ವಿಚಾರಣಾ ಸಮಿತಿ/ ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣಾ ಸಮಿತಿ ಸಭೆಯ ನಡಾವಳಿಗಳು

ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2022 ರ ಮಾರ್ಚ್ ಮತ್ತು ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ I,III,V ನೇ ಸೆಮಿಸ್ಟರ್, 2022 ರ ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ II,IV,VI ನೇ ಸೆಮಿಸ್ಟರ್ (CBCS), 2022 ರ ಮೇ ಮತ್ತು ಜೂನ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ ಪ್ರಥಮ ಸೆಮಿಸ್ಟರ್ (NEP) ಮತ್ತು 2022 ರ ನವಂಬರ್ ಮಾಹೆಯಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ ದ್ವಿತೀಯ ಸೆಮಿಸ್ಟರ್ (NEP) ಹಾಗೂ 2022 ರ ಆಗಸ್ಟ್ ಮಾಹೆಯಲ್ಲಿ ನಡೆದ ಸ್ನಾತಕ ಶಿಕ್ಷಣ ಪದವಿ(ಬಿ.ಇಡಿ.) ತೃತೀಯ ಸೆಮಿಸ್ಟರ್‌ಗಳ ಪರೀಕ್ಷಾ ಅಕ್ರಮ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಟ್ಟು 58 ವಿದ್ಯಾರ್ಥಿಗಳನ್ನು ಹಾಗೂ ಪರೀಕ್ಷಾ ಕಾರ್ಯಗಳ ಲೋಪದೋಷವೆಸಗಿದ ಇಬ್ಬರು ಅಧ್ಯಾಪಕರುಗಳನ್ನು **ದಿನಾಂಕ:05.01.2023 ರಂದು ಆಯೋಜಿಸಿದ್ದ** ಪರೀಕ್ಷಾ ಅಕ್ರಮ ಚಟುವಟಿಕೆಗಳ ವಿಚಾರಣಾ ಸಮಿತಿ/ ಪರೀಕ್ಷಾ ಲೋಪದೋಷ ವಿಚಾರಣಾ ಸಮಿತಿ ಸಭೆಯ ಮುಂದೆ ಹಾಜರು ಪಡಿಸಲಾಗಿತ್ತು. ಸದರಿ ಸಮಿತಿ ಸಭೆಯ ನಡಾವಳಿಗಳನ್ನು ಅನುಬಂಧ-01 ರಲ್ಲಿ ಸಲ್ಲಿಸುತ್ತಾ, **ದಿನಾಂಕ : 17.01.2023 ರಂದು ನಡೆಯುವ ಪ್ರಥಮ ಸಾಮಾನ್ಯ ವಿದ್ಯಾ ವಿಷಯಕ ಪರಿಷತ್ತಿನ ಸಭೆಯ** ಮುಂದೆ ಚರ್ಚೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

| ವಿಷಯ ಸಂಖ್ಯೆ: | 2023: ಸಾ.ವಿ.ವಿ.ಪ-01: ಕಾ.ಅ.ಪ-01: ದಿನಾಂಕ: 17.01.2023 |
|---|---|

**ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ಈ ಕಾಲೇಜಿಗೆ 2022-23ನೇ ಶೈಕ್ಷಣಿಕ ಸಾಲಿಗೆ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹಾಲಿ ಇರುವ 40 ಪ್ರವೇಶ ಮಿತಿಗೆ ಹೆಚ್ಚುವರಿಯಾಗಿ 20 ಸೀಟುಗಳನ್ನು ಪ್ರವೇಶ ಮಾಡಿಕೊಳ್ಳಲು ಅನುಮತಿ ನೀಡುವಂತೆ ಕೋರಿರುವ ಕುರಿತು.**

**ಉಲ್ಲೇಖ:** ಪತ್ರ ಸಂಖ್ಯೆ:ಸಪ್ರದಕಾಕು/343/ಸನೀಕು/2022-23 ದಿನಾಂಕ:20.12.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ಇವರು 2022-23ನೇ ಶೈಕ್ಷಣಿಕ ಸಾಲಿಗೆ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹೆಚ್ಚುವರಿ 20 ಸೀಟುಗಳನ್ನು ಪ್ರವೇಶ ಮಾಡಿಕೊಳ್ಳಲು ಅನುಮತಿಗಾಗಿ ಮನವಿ ಪತ್ರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ಪರಿಶೀಲಿಸಲಾಗಿದ್ದು, 2020-21ನೇ ಶೈಕ್ಷಣಿಕ ಸಾಲಿನ ಸಂಯೋಜನೆಯಿಂದಲೂ ಸಂಯೋಜನೆ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಡೆಸಲು ಸರ್ಕಾರವು ಆದೇಶಿಸಿದ್ದು, ಇದುವರೆವಿಗೂ ಸಂಯೋಜನೆಗೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು ಆನ್‌ಲೈನ್ ಮುಖಾಂತರವೇ ನಡೆಸಲಾಗುತ್ತಿದೆ. ಆನ್-ಲೈನ್ ಸಂಯೋಜನೆಯ ಎಲ್ಲಾ ಪ್ರಕ್ರಿಯೆಗಳು ಜೂನ್ 2022ರ ಮಾಹೆಗೆ ಪೂರ್ಣಗೊಳಿಸಲಾಗಿರುತ್ತದೆ.

2022-23ನೇ ಸಾಲಿನ ಆನ್-ಲೈನ್ ಸಂಯೋಜನೆಯ ಎಲ್ಲಾ ಪ್ರಕ್ರಿಯೆಗಳು ಮುಕ್ತಾಯವಾಗಿರುವುದರಿಂದ ಪ್ರಸ್ತುತ ವಿದ್ಯಾರ್ಥಿಗಳ ಮತ್ತು ಪೋಷಕರ ಒತ್ತಾಯದ ಮೇರೆಗೆ ಕುಣಿಗಲ್ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಸದರಿ ಕಾಲೇಜಿನ ಕಾಲೇಜು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಡಾ. ಹೆಚ್.ಡಿ ರಂಗನಾಥ ಇವರು ಮಾನ್ಯ ಕುಲಪತಿಗಳಿಗೆ ಎಂ.ಕಾಂ ಕೋರ್ಸಿನ ಪ್ರವೇಶಮಿತಿಯನ್ನು ಹೆಚ್ಚಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2022-23ನೇ ಶೈಕ್ಷಣಿಕ ಸಾಲಿಗೆ M.Com. ಕೋರ್ಸಿನ ಪ್ರವೇಶ ಮಿತಿಯನ್ನು 40 ರಿಂದ 60ಕ್ಕೆ ಹೆಚ್ಚಿಸುವ ಬಗ್ಗೆ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿ, ಪರಿಗಣನೆಗೆ ತೆಗೆದುಕೊಂಡು ಎಂ.ಕಾಂ. ಕೋರ್ಸ್‌ಗೆ ಹೆಚ್ಚುವರಿ 20 ಸೀಟುಗಳನ್ನು ಪ್ರವೇಶಾತಿ ಮಾಡಿಕೊಳ್ಳಲು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಅನುಮತಿ ನೀಡಲಾಗಿರುತ್ತದೆ.

1) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ಈ ಕಾಲೇಜಿಗೆ 2014-15ನೇ ಶೈಕ್ಷಣಿಕ ಸಾಲಿನಲ್ಲಿ ನಿಯಮಾನುಸಾರ ಕ್ರಮವಹಿಸಿ ಎಂ.ಕಾಂ ಕೋರ್ಸಿನ ಪ್ರವೇಶಮಿತಿಯನ್ನು 40ರಿಂದ 60ಕ್ಕೆ ಹೆಚ್ಚಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.
2) ತದನಂತರದಲ್ಲಿ ಸದರಿ ಕಾಲೇಜಿನವರು 2017-18ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂದರ್ಭದಲ್ಲಿ ಎಂ.ಕಾಂ ಕೋರ್ಸಿನ ಪ್ರವೇಶಮಿತಿಯನ್ನು 40ಕ್ಕೆ ಕೋರಿದ್ದು ಅದರಂತೆಯೇ 2022-23ನೇ ಸಾಲಿನವರೆಗೂ ಸಂಯೋಜನೆ ನೀಡಲಾಗುತ್ತಿದೆ.
3) ಸತತ 6 ವರ್ಷಗಳು ಎಂ.ಕಾಂ ಕೋರ್ಸಿನ ಪ್ರವೇಶಮಿತಿ 40 ಕ್ಕೆ ನಿಗದಿಯಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ, ಈ ಕೆಳಕಂಡ ಷರತ್ತುಗಳನ್ವಯ 20 ಸೀಟುಗಳ ಹೆಚ್ಚುವರಿ ಪ್ರವೇಶಾತಿಯನ್ನು ಮಾಡಿಕೊಳ್ಳಬಹುದೆಂದು ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ ಇವರಿಗೆ ದಿನಾಂಕ 23.12.2022ರ ಪತ್ರದಲ್ಲಿ ತಿಳಿಸಲಾಗಿದೆ.

1) 2022-23ನೇ ಶೈಕ್ಷಣಿಕ ಸಾಲಿನ ಒಂದು ಬಾರಿಯ ಪ್ರವೇಶಾತಿಗೆ ಮಾತ್ರ ಅನ್ವಯವಾಗುವಂತೆ ಎಂ.ಕಾಂ ಕೋರ್ಸಿನ ಹಾಲಿ ಇರುವ 40 ಪ್ರವೇಶಮಿತಿಯ ಜೊತೆಗೆ 20 ಸೀಟುಗಳನ್ನು ಪ್ರವೇಶಾತಿ ಮಾಡಿಕೊಳ್ಳಬಹುದು.
2) ಪ್ರಸ್ತುತ ಅನುಮತಿ ನೀಡಲಾಗಿರುವ 20 ಸೀಟುಗಳಿಗೆ Merit / roaster ಅನ್ವಯ ನಿಯಮಾನುಸಾರ ದಿನಾಂಕ 26.12.2022ರೊಳಗೆ ಪ್ರವೇಶ ಮಾಡಿಕೊಳ್ಳುವಂತೆ ಈ ಮೂಲಕ ಸೂಚಿಸಿದೆ.
3) 2022-23ನೇ ಶೈಕ್ಷಣಿಕ ಸಾಲಿಗೆ M.Com. ಕೋರ್ಸಿಗೆ ಪ್ರವೇಶ ಮಿತಿಯನ್ನು 40 ರಿಂದ 60ಕ್ಕೆ ಹೆಚ್ಚುವರಿ ಸೀಟುಗಳ ಅನುಮೋದನೆಯನ್ನು ಸರ್ಕಾರದ ಹಂತದಲ್ಲಿ ಅನುಮೋದನೆ ಪಡೆದುಕೊಳ್ಳುವುದು ಪ್ರಾಂಶುಪಾಲರ ಜವಾಬ್ದಾರಿಯಾಗಿರುತ್ತದೆ.
4) ಮುಂಬರುವ 2023-24ನೇ ಶೈಕ್ಷಣಿಕ ಸಾಲಿಗೆ M.Com. ಕೋರ್ಸಿನ 40 ರಿಂದ 60ಕ್ಕೆ ಪ್ರವೇಶ ಮಿತಿಯ ಹೆಚ್ಚಳದ ಪ್ರಸ್ತಾವನೆಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಿದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, 2022-23ನೇ ಶೈಕ್ಷಣಿಕ ಸಾಲಿಗೆ ಒಂದು ಬಾರಿಗೆ ಮಾತ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್‌ಗೆ ಎಂ.ಕಾಂ ಕೋರ್ಸಿನಲ್ಲಿ ಹಾಲಿ ಇರುವ 40 ಪ್ರವೇಶಮಿತಿಯ ಜೊತೆಗೆ ಹೆಚ್ಚುವರಿ 20 ಸೀಟುಗಳನ್ನು ಪ್ರವೇಶಾತಿ ಮಾಡಿಕೊಳ್ಳಲು ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| | |
|---|---|
| ವಿಷಯ ಸಂಖ್ಯೆ | 2022-23: ವಿ.ವಿ.ಪ:01 ಸ್ಥೈ.ಪ:01 ದಿನಾಂಕ: 17.01.2023 |

**ವಿಷಯ:** ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ (ಎಂ.ಎಸ್ಸಿ. – ಸೂಕ್ಷ್ಮಜೀವಶಾಸ್ತ್ರ) ವಿಷಯದ ನೂತನ ಪಠ್ಯಕ್ರಮವನ್ನು ಅನುಮೋದಿಸಿ ಅಧಿಸೂಚಿಸಿರುವ ಕುರಿತು ಸ್ಥಿರೀಕರಣ ಕೋರಿ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ. ಶರತ್‌ಚಂದ್ರ ಆರ್. ಜಿ., ಸಂಯೋಜಕರು, ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ವಿಷಯದ ಅಧ್ಯಯನ ಮಂಡಳಿ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ದಿನಾಂಕ:29.09.2022 ರಂದು ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ವಿಷಯದ ಅಧ್ಯಯನ ಮಂಡಳಿಯ ಸಭೆಯನ್ನು ನಡೆಸಿ, ಸದಸ್ಯರುಗಳ ಅನುಮೋದನೆ ಪಡೆದು, ನೂತನ ಪಠ್ಯಕ್ರಮವನ್ನು ಸಿದ್ಧಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

ಆದ್ದರಿಂದ, ಸದರಿ ಸ್ನಾತಕೋತ್ತರ ಸೂಕ್ಷ್ಮಜೀವಶಾಸ್ತ್ರ ವಿಷಯದ ನೂತನ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ದಿನಾಂಕ:09.11.2022ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಕ್ರಮವನ್ನು ವಿದ್ಯಾ ವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23: ವಿ.ವಿ.ಪ:01 ಶೈ.ವಿ.:02 ದಿನಾಂಕ: 17.01.2023 |
|---|---|

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು ಸ್ಥಿರೀಕರಣ ಕೋರಿ.

ಉಲ್ಲೇಖ: 1. ಸಂಖ್ಯೆ:ತು.ವಿ.:ಶೈ.ವಿ:ಸ್ನಾಅಮಂ(ಪಿ.ಜಿ):2022-23/3467, ದಿನಾಂಕ: 06.10.2022 (ಸಾರ್ವಜನಿಕ ಆಡಳಿತ)

7. ಸಂಖ್ಯೆ:ತು.ವಿ.:ಶೈ.ವಿ:ಸ್ನಾಅಮಂ(ಪಿ.ಜಿ): 2022-23/3572, ದಿನಾಂಕ: 12.10.2022 (ಮನೋವಿಜ್ಞಾನ)
8. ಸಂಖ್ಯೆ:ತು.ವಿ.:ಶೈ.ವಿ:ಸ್ನಾಅಮಂ(ಪಿ.ಜಿ): 2022-23/3701, ದಿನಾಂಕ: 20.10.2022 (ಎಲೆಕ್ಟ್ರಾನಿಕ್ ಮೀಡಿಯಾ)
9. ಸಂಖ್ಯೆ:ತು.ವಿ.:ಶೈ.ವಿ:ಸ್ನಾಅಮಂ(ಪಿ.ಜಿ): 2022-23/4019, ದಿನಾಂಕ: 18.11.2022 (ಸಂಸ್ಕೃತ)
10. ಸಂಖ್ಯೆ:ತು.ವಿ.:ಶೈ.ವಿ:ಸ್ನಾಅಮಂ(ಪಿ.ಜಿ): 2022-23/4805, ದಿನಾಂಕ:07.01.2023 (ಪರಿಸರ ವಿಜ್ಞಾನ)
11. ಸಂಖ್ಯೆ:ತು.ವಿ.:ಶೈ.ವಿ:ಸ್ನಾಅಮಂ(ಪಿ.ಜಿ): 2022-23/4806, ದಿನಾಂಕ:07.01.2023 (ಜೈನ ಸಂಸ್ಕೃತ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್)

* * * * *

ವಿಶ್ವವಿದ್ಯಾನಿಲಯದ ಈ ಕೆಳಕಂಡ ಸ್ನಾತಕೋತ್ತರ ವಿಷಯಗಳ ಅಧ್ಯಯನ ಮಂಡಳಿಗಳನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಉಲ್ಲೇಖಿತ ಅಧಿಸೂಚನೆಗಳಲ್ಲಿ ಈಗಾಗಲೇ ರಚಿಸಿ ಅಧಿಸೂಚಿಸಲಾಗಿದೆ.

**1. ಸಾರ್ವಜನಿಕ ಆಡಳಿತ**

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಪ್ರೊ. ಬಸವರಾಜ ಜಿ. ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಪ್ರೊ. ಉದ್ದಗಟ್ಟಿ ವೆಂಕಟೇಶ ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ. | ಡಾ. ಸುರೇಶ ಕೆ. ಸಿ. ಸಹಾಯಕ ಪ್ರಾಧ್ಯಾಪಕರು ಸ್ನಾತಕೋತ್ತರ ಸಾರ್ವಜನಿಕ ಆಡಳಿತ ಅಧ್ಯಯನ & ಸಂಶೋಧನಾ ವಿಭಾಗ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಡಾ. ಮಹಾಲಿಂಗ ಕೆ ಸಹಾಯಕ ಪ್ರಾಧ್ಯಾಪಕರು ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಡಾ. ಶ್ರೀಧರ್ ಬಾರ್ಕಿ ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ |

**2. ಮನೋವಿಜ್ಞಾನ**

| ಅಧ್ಯಕ್ಷರು | ಸದಸ್ಯರು | | | | ಸಂಚಾಲಕರು |
|---|---|---|---|---|---|
| ಡಾ. ಷಣ್ಮುಖ್ ಕಾಂಬಳಿ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಪವಟೇನಗರ, ಧಾರವಾಡ | ಡಾ. ಕೆ.ಟಿ. ಶ್ವೇತ ಅರ್ನಿವೇಧ ಫೌಂಡರ್, ಫೌಂಡೇಷನ್ ರಿಸೋರ್ಸ್ ಸೆಂಟರ್ ಫಾರ್, ಸೈಕಾಲಜಿಕಲ್ ವೆಲ್‌ಬೀಯಿಂಗ್, ಕೆನರಾ ಬ್ಯಾಂಕ್ ಹಿಂಭಾಗ, ಇನ್‌ಲ್ಯಾಂಡ್ ಎಂಬೋನಿ ಲೇನ್, ಕದ್ರಿ ಕಾಂಬ್ಲ ರೋಡ್, ಮಂಗಳೂರು | ಡಾ.ಎಲಿಜಬೆತ್ ಜಾಸ್ಮಿನ್ ಸಹ ಪ್ರಾಧ್ಯಾಪಕರು, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈಕಾಲಜಿ, ಅಂಡ್ ರೀಸರ್ಚ್, ಸೇಂಟ್ ಆಂಟೋನಿಸ್ ಫ್ರಿಯಾರಿ ಚರ್ಚ್, 85, ಹೊಸೂರ್ ರಸ್ತೆ, ಕಾವೇರಿ ಲೇ ಔಟ್, ಎಸ್. ಜಿ. ಪಾಳ್ಯ, ಬೆಂಗಳೂರು. | ಡಾ. ಅರ್ಚನ ಭಟ್ ಸಹ ಪ್ರಾಧ್ಯಾಪಕರು, ಕಟೀಲ್ ಅಶೋಕ್ ಪೈ ಮೆಮೋರಿಯಲ್ ಇನ್ಸಿಟಿಟ್ಯೂಟ್, 1ನೇ ಕ್ರಾಸ್ ಪಾರ್ಕ್ ಬಡಾವಣೆ, ತಿಲಕ್ ನಗರ್, ದುರ್ಗಿಗುಡಿ, ಶಿವಮೊಗ್ಗ | ಡಾ. ಮಹದೇವಸ್ವಾಮಿ ಪಿ. ಸಹ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ, ಮೈಸೂರು | ಡಾ. ಹೇಮಾವತಿ ಬಿ. ಎನ್. ಸಂಯೋಜಕರು, ಸ್ನಾತಕೋತ್ತರ ಮನೋವಿಜ್ಞಾನ ಅಧ್ಯಯನ & ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. |

**3. ಎಲೆಕ್ಟ್ರಾನಿಕ್ ಮೀಡಿಯಾ**

| ಅಧ್ಯಕ್ಷರು | ಸದಸ್ಯರು | | | ಸಂಚಾಲಕರು |
|---|---|---|---|---|
| ಡಾ. ಪೂರ್ಣಾನಂದ ಡಿ. ಎಸ್. ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸಂವಹನ ವಿಭಾಗ, ಶಂಕರಘಟ್ಟ, ಶಿವಮೊಗ್ಗ | ಡಾ. ಓಂಕಾರ ಕಾಕಡೆ. ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಬಿಜಾಪುರ | ಡಾ. ನಾಗೇಂದ್ರ. ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರ, ಎಸ್. ಎಸ್.ಐ.ಟಿ. ಕ್ಯಾಂಪಸ್, ಮರಳೂರು, ತುಮಕೂರು. | ಶ್ರೀಮತಿ ಜ್ಯೋತಿ ಸಿ. ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರ, ಎಸ್. ಎಸ್.ಐ.ಟಿ. ಕ್ಯಾಂಪಸ್, ಮರಳೂರು, ತುಮಕೂರು. | ಡಾ. ಬಿ.ಟಿ. ಮುದ್ದೇಶ್ ನಿರ್ದೇಶಕರು & ಸಹ ಪ್ರಾಧ್ಯಾಪಕರು, , ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರ, ಎಸ್. ಎಸ್.ಐ.ಟಿ. ಕ್ಯಾಂಪಸ್, ಮರಳೂರು, ತುಮಕೂರು. |

**4. ಸಂಸ್ಕೃತ**

| ಸದಸ್ಯರು | | | ಸಂಚಾಲಕರು |
|---|---|---|---|
| ಡಾ. ಕುಮಾರ್ ಬಾಗೇವಾಡಿಮಠ್ ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯ ತಿರುಪತಿ – 517507 | ಡಾ. ಸುರೇಶ ಆರ್. ನಂ. 1078, ಫಸ್ಟ್ ಮೇನ್, 2ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು - 570008 | ಶ್ರೀಮತಿ ಪ್ರೇಮ ಅನಂತ್ ಉಪನ್ಯಾಸಕರು, ವಿದ್ಯಾವಾಹಿನಿ ಸ್ನಾತಕೋತ್ತರ ಕಾಲೇಜು. ಕುವೆಂಪು ನಗರ, ತುಮಕೂರು | ಡಾ. ರಮೇಶ್ ಸಾಲಿಯಾನ ಸಂಯೋಜಕರು, ಸಂಸ್ಕೃತಿ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು |

5 ಆ. ಪರಿಸರ ವಿಜ್ಞಾನ

| ಸದಸ್ಯರು | | | | | ಸಂಚಾಲಕರು |
|---|---|---|---|---|---|
| ಡಾ. ಶರತ್‌ಚಂದ್ರ ಆರ್. ಜಿ.<br>ಸಹಾಯಕ ಪ್ರಾಧ್ಯಾಪಕರು,<br>ಸಂಯೋಜಕರು, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ & ಸಂಶೋಧನಾ ವಿಭಾಗ,<br>ತುಮಕೂರು ವಿಶ್ವವಿದ್ಯಾನಿಲಯ,<br>ತುಮಕೂರು. | ಪ್ರೊ. ಎಸ್. ಶ್ರೀಕಂಠಸ್ವಾಮಿ<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ & ಸಂಶೋಧನಾ ವಿಭಾಗ,<br>ಮೈಸೂರು ವಿಶ್ವವಿದ್ಯಾನಿಲಯ,<br>ಮೈಸೂರು. | ಪ್ರೊ. ಕೆ. ಯೋಗೇಂದ್ರ<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ & ಸಂಶೋಧನಾ ವಿಭಾಗ,<br>ಕುವೆಂಪು ವಿಶ್ವವಿದ್ಯಾನಿಲಯ<br>ಶಂಕರಘಟ್ಟ, ಶಿವಮೊಗ್ಗ | ಪ್ರೊ. ಬಿ.ಸಿ. ನಾಗರಾಜ<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ & ಸಂಶೋಧನಾ ವಿಭಾಗ,<br>ಬೆಂಗಳೂರು ವಿಶ್ವವಿದ್ಯಾನಿಲಯ<br>ಬೆಂಗಳೂರು | ರಾಂಜನ್ ಹೆಬ್ಬಾರ್<br>ಜನರಲ್ ಮ್ಯಾನೇಜರ್,<br>ಎನ್‌ವೈರ್‌ನ್‌ಮೆಂಟ್ ಹೆಲ್ತ್ ಅಂಡ್ ಸೇಫ್ಟಿ ಮ್ಯಾನೇಜ್‌ಮೆಂಟ್,<br>ಟೊಯೊಟೊ ಕಿರ್ಲೋಸ್ಕರ್, ಬಿಡದಿ. | ಡಾ. ದ್ವಾರಕನಾಥ್ ವಿ.<br>ಸಹಾಯಕ ಪ್ರಾಧ್ಯಾಪಕರು,<br>ಸಂಯೋಜಕರು, ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ & ಸಂಶೋಧನಾ ವಿಭಾಗ,<br>ತುಮಕೂರು ವಿಶ್ವವಿದ್ಯಾನಿಲಯ,<br>ತುಮಕೂರು. |

6 ಇ. ಜೈನ ಸಂಸ್ಕೃತ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್

| ಅಧ್ಯಕ್ಷರು | ಸದಸ್ಯರು | |
|---|---|---|
| **ಪ್ರೊ. ಪರಮಶಿವ ಮೂರ್ತಿ ಡಿ.**<br>ವಿ.ಪ್ರಾಧ್ಯಾಪಕರು,<br>ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಡಾ. ಎಸ್. ಪಿ. ಪದ್ಮಪ್ರಸಾದ್**<br>ತೃಪ್ತಿ, 2ನೇ ಕ್ರಾಸ್<br>ಕನಕಾಂಬರ ರಸ್ತೆ, ಗೋಕುಲ ಬಡಾವಣೆ<br>ತುಮಕೂರು | **ಡಾ. ಶಿವಣ್ಣ ಎಸ್.**<br>ಸಹಾಯಕ ಪ್ರಾಧ್ಯಾಪಕರು,<br>ಕನ್ನಡ ವಿಭಾಗ,ವಿಶ್ವವಿದ್ಯಾನಿಲಯ ಕಲಾ ಕಾಲೇಜು<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. |

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಮತ್ತು ಸಿಂಡಿಕೇಟ್ ಸಭೆಗಳ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23: ವಿ.ವಿ.ಪ:01 ಶೈ.ವಿ.:03 ದಿನಾಂಕ: 17.01.2023 |
|---|---|

**ವಿಷಯ: 2022–23ನೇ ಸಾಲಿಗೆ ಎಂ.ಬಿ.ಎ. ಕೋರ್ಸ್‌ನ ಪ್ರವೇಶ ಮಿತಿಯನ್ನು ಹೆಚ್ಚಿಸುವಂತೆ ಕೋರಿರುವ ಕುರಿತು.**

**ಉಲ್ಲೇಖ: AICTE Letter No. F.No.South-West/1-10975500271/2022/EOA Date:02-Jun-2022**

* * * * *

ನೂರ್ ಅಫ್ಜಾ, ಅಧ್ಯಕ್ಷರು, ಸ್ನಾತಕೋತ್ತರ ವ್ಯವಹಾರ ಆಡಳಿತ ವಿಭಾಗದ ವಿಭಾಗೀಯ ಪರಿಷತ್ (Departmental Council), ಇವರು ದಿನಾಂಕ: 01.12.2022 ರಂದು ಮನವಿ ಸಲ್ಲಿಸಿ, 2022–23ನೇ ಸಾಲಿನ ಎಂ.ಬಿ.ಎ. ಕೋರ್ಸ್‌ನ ಪ್ರವೇಶ ಮಿತಿಯನ್ನು ಹೆಚ್ಚಿಸುವ ಸಂಬಂಧ ದಿನಾಂಕ:06.09.2022ರಂದು ವಿಭಾಗೀಯ ಪರಿಷತ್ ಸಭೆಯನ್ನು ನಡೆಸಿ, ಸದರಿ ನಡಾವಳಿಯನ್ನು ಸಲ್ಲಿಸಿರುತ್ತಾರೆ. ವಿಶ್ವವಿದ್ಯಾನಿಲಯದ ಎಂ.ಬಿ.ಎ. ವಿಭಾಗದ ಪ್ರವೇಶ ಮಿತಿಯನ್ನು 60 ರಿಂದ 120ಕ್ಕೆ ಹೆಚ್ಚಿಸುವಂತೆ ವ್ಯವಹಾರ ಆಡಳಿತ ವಿಭಾಗದ ವಿಭಾಗೀಯ ಪರಿಷತ್ ಸಭೆಯು ಶಿಫಾರಸ್ಸನ್ನು ಮಾಡಿರುತ್ತದೆ

ಸದರಿ ಮನವಿಗೆ ಸಂಬಂಧಿಸಿದಂತೆ, AICTE ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್, ಇವರು 2022–23ನೇ ಶೈಕ್ಷಣಿಕ ಸಾಲಿಗೆ ಎಂ.ಬಿ.ಎ. ಕೋರ್ಸ್‌ನ ಅನುಮೋದನೆಯನ್ನು ವಿಸ್ತರಣೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಎಂ.ಬಿ.ಎ. ಕೋರ್ಸ್‌ನ ಪ್ರವೇಶ ಮಿತಿಯನ್ನು 60 ಎಂದು ಉಲ್ಲೇಖಿತ ಪತ್ರದಲ್ಲಿ ಸದಸ್ಯ ಕಾರ್ಯದರ್ಶಿಗಳು, AICTE ಇವರು ತಿಳಿಸಿರುತ್ತಾರೆ.

ಆದ್ದರಿಂದ ಎಂ.ಬಿ.ಎ. ವಿಭಾಗದ ಮುಖ್ಯಸ್ಥರ ಮನವಿಯಂತೆ ಹಾಗೂ ವಿಭಾಗೀಯ ಪರಿಷತ್ ಸಭೆಯ ಶಿಫಾರಸ್ಸಿನಂತೆ ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಎಂ.ಬಿ.ಎ. ವಿಭಾಗದ ಪ್ರವೇಶ ಮಿತಿಯನ್ನು 60 ರಿಂದ 120ಕ್ಕೆ ಹೆಚ್ಚಿಸುವ ಕುರಿತು ಸರಕಾರ, AICTE-ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ ಮತ್ತು KEA- ಕರ್ನಾಟಕ ಪರೀಕ್ಷಾ ಪ್ರಾಧಿಕಾರಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕಿರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಸಿಂಡಿಕೇಟ್ ಸಭೆಗಳ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23: ವಿ.ವಿ.ಪ:01 ಶೈ.ವಿ:04 ದಿನಾಂಕ: 17.01.2023 |
|---|---|

**ವಿಷಯ: ಸ್ನಾತಕೋತ್ತರ Choice Based Credit System (CBCS) ವಿನಿಯಮವನ್ನು ತಿದ್ದುಪಡಿ/ಮಾರ್ಪಾಡುಗಳೊಂದಿಗೆ ಪರಿಷ್ಕರಿಸಿ ಸಲ್ಲಿಸಿರುವ ಕುರಿತು**

*****

ಸರ್ಕಾರದ ದಿನಂಕ:08.04.2022ರ ಪತ್ರದಲ್ಲಿ ಸ್ನಾತಕೋತ್ತರ ವ್ಯಾಸಂಗ ಕ್ರಮಗಳ ಸಂಬಂಧದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಬೆಂಗಳೂರು ನಗರ ವಿ.ವಿ. ಹಾಗೂ ಬೆಂಗಳೂರು ಉತ್ತರ ವಿ.ವಿ. ರಿಂದ ರಚಿಸಿದ್ದ ವಿನಿಯಮಗಳಿಗೆ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ನೀಡಲಾಗಿದೆ. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನೀತಿ–2000ರಡಿ ಪರಿಶೀಲಿಸಿ ಸದರಿ ವಿಶ್ವವಿದ್ಯಾನಿಲಯಗಳ ಕ್ರಮಗಳನ್ನು ಅನುಸರಿಸಿ ತುಮಕೂರು ವಿಶ್ವವಿದ್ಯಾನಿಲಯದ ಕೋರ್ಸುಗಳ ಸಂಬಂಧದಲ್ಲಿ ಸೆಮಿಸ್ಟರ್ ಕ್ರಮವಿಧಿ ಹಾಗೂ ಆಯ್ಕೆ ಆಧಾರಿತ ಪ್ರತ್ಯಾಂಕ ವ್ಯವಸ್ಥೆಯಡಿ ಹೊಸದಾಗಿ ವಿನಿಯಮಗಳನ್ನು ರಚಿಸಿಕೊಂಡು, ಮರು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸರ್ಕಾರವು ನಿರ್ದೇಶಿಸಿರುತ್ತದೆ.

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ CBCS ವಿನಿಯಮವನ್ನು ತಿದ್ದುಪಡಿ/ಮಾರ್ಪಾಡುಗಳೊಂದಿಗೆ Choice Based Credit System ನ್ನು ಅನುಷ್ಠಾನಗೊಳಿಸುವ ಸಂಬಂಧವಾಗಿ ದಿನಾಂಕ: 15.06.2022 ರಂದು ಸಮಿತಿಯನ್ನು ಪುನರ್ ರಚಿಸಿ ಅಧಿಸೂಚಿಸಲಾಗಿರುತ್ತದೆ. ಸದರಿ ಸಮಿತಿಯು ದಿನಾಂಕ:09.11.2022 ರಂದು ಸಭೆ ನಡೆಸಿ ತಿದ್ದುಪಡಿ/ಮಾರ್ಪಾಡುಗಳೊಂದಿಗೆ Choice Based Credit System ಪರಿಷ್ಕೃತ ವಿನಿಯಮವನ್ನು ಸಿದ್ಧಪಡಿಸಿ ಸಲ್ಲಿಸಲಾಗಿರುತ್ತದೆ.

ಸರ್ಕಾರದ ನಿರ್ದೇಶನದಂತೆ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು, ಸಮಿತಿಯು ಸಿದ್ಧಪಡಿಸಿ ಸಲ್ಲಿಸಿರುವ ತಿದ್ದುಪಡಿ/ಮಾರ್ಪಾಡುಗಳೊಂದಿಗೆ Choice Based Credit System ಪರಿಷ್ಕೃತ ಸ್ನಾತಕೋತ್ತರ ವಿನಿಯಮವನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಬೇಕಿರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಸಿಂಡಿಕೇಟ್ ಸಭೆಗಳ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 : ವಿ.ವಿ.ಪ.: 01 : ಶೈವಿ : 05 ದಿನಾಂಕ: 17.01.2023 |
|---|---|

**ವಿಷಯ : ಸ್ನಾತಕ ಬಿ.ವೋಕ್ ಪದವಿಯು ಬಿ.ಎಸ್ಸಿ. ಪದವಿಗೆ ಸಮಾನಾಂತರ ಸ್ನಾತಕ ಪದವಿ ಎಂದು ಸ್ಪಷ್ಟೀಕರಣ ನೀಡಿರುವ ಕುರಿತು ಸ್ಥಿರೀಕರಣ ಕೋರಿ.**

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ದಿವ್ಯಶ್ರೀ ಸಿ. ಎಂಬ ವಿದ್ಯಾರ್ಥಿನಿಯು ಬಿ.ವೋಕ್ ಸ್ನಾತಕ ಪದವಿಯನ್ನು ಪಡೆದಿದ್ದು, ಈ ವಿದ್ಯಾರ್ಥಿನಿಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರಿ ನೌಕರಿ ಪಡೆಯುವ ಸಂಬಂಧ ಬಿ.ವೋಕ್ ಸ್ನಾತಕ ಪದವಿಯನ್ನು ಬಿ.ಎಸ್ಸಿ. ಪದವಿಗೆ ಸಮಾನವೆಂದು ಸ್ಪಷ್ಟೀಕರಿಸುವಂತೆ ಕೋರಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಯು.ಜಿ.ಸಿ. ಪತ್ರ ಸಂಖ್ಯೆ: D.O. No. F.2-7/2014/(CC/INVEQF)Misc. ದಿನಾಂಕ: 03.08.2016ರ ಪ್ರಕಾರ (B.Voc a Bachelor level degree Specified by UGC under section22(3) of UGC Act, 1956 and notified in official Gazette of India datd 19th January 2013) ರ ಪ್ರಕಾರ ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯ ಡೀನರು ಹಾಗೂ ಬಿ.ವೋಕ್ ಅಧ್ಯಯನ ಮಂಡಳಿಯ ಅಭಿಪ್ರಾಯದಂತೆ ಸ್ನಾತಕ ಬಿ.ವೋಕ್ ಪದವಿಯು ಇತರೆ ಯಾವುದೇ ಶಿಸ್ತು / ವಿಷಯದ ಸ್ನಾತಕ ಪದವಿಗೆ ಸಮಾನಾಂತರವೆಂದು ನೀಡಲಾಗಿದೆ.

**ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.**

| ವಿಷಯ ಸಂಖ್ಯೆ | 2022-23:ವಿವಿಪ:01:ಶೈವಿ:06:ದಿನಾಂಕ:17.01.2023 |
|---|---|

ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು.

ಉಲ್ಲೇಖ: ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022-23:3014 ದಿನಾಂಕ: 24.08.2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆಳಕಂಡ ಸ್ನಾತಕ ವಿಷಯದ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಉಲ್ಲೇಖಿತ ಅಧಿಸೂಚನೆಯಲ್ಲಿ ಈಗಾಗಲೇ ರಚಿಸಿ ಅಧಿಸೂಚಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯವು ಈ ಕೆಳಕಂಡ ಸ್ನಾತಕ ವಿಷಯದ ಅಧ್ಯಯನ ಮಂಡಳಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 33ರಡಿಯಲ್ಲಿ ಅಧಿಸೂಚಿಸಿದ ದಿನಾಂಕದಿಂದ ಮುಂದಿನ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಈಗಾಗಲೇ ರಚಿಸಿ ಅಧಿಸೂಚಿಸಲಾಗಿರುತ್ತದೆ, ವಿವರ ಈ ಕೆಳಕಂಡಂತಿದೆ:

**ಸ್ನಾತಕ ಪದವಿ ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ ಅಧ್ಯಯನ ಮಂಡಳಿ ವಿವರ:-**

| ಅಧ್ಯಕ್ಷರು | ಸದಸ್ಯರು | |
|---|---|---|
| ಪ್ರೊ. ಅಣ್ಣಮ್ಮ<br>ಪ್ರಾಧ್ಯಾಪಕರು, ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತು.ವಿ.ತು | ಶ್ರೀ ವಿಜಯಕುಮಾರ್ ಹೆಚ್<br>ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ತುಮಕೂರು | ಶ್ರೀಮತಿ ವಸಂತಮ್ಮ ಕೆ.ಎಂ<br>ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ತುಮಕೂರು |

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23:ವಿವಿಪ:01:ಶೈವಿ:07:ದಿನಾಂಕ:17.01.2023 |
|---|---|

ವಿಷಯ: ಸ್ನಾತಕ ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ Programme Structure ನ ಸ್ಥಿರೀಕರಣ ಕೋರಿ.

*****

ಶ್ರೀ ಸಿದ್ಧಲಿಂಗೇಶ್ವರ ಕನ್ನಡ ಸ್ನಾತಕ–ಸ್ನಾತಕೋತ್ತರ ಕಾಲೇಜನ್ನಾಗಿ ಪರಿವರ್ತಿಸುವ ಸಂಬಂಧ ಸರ್ಕಾರದ ಪತ್ರ ಸಂಖ್ಯೆ:ಇಡಿ 172 ಯುಎನ್‌ಇ 2022 ದಿನಾಂಕ 07.09.2022 ರಲ್ಲಿ ಪ್ರಸ್ತುತ 10 ರಿಂದ 12 ರವರೆಗೆ ಪ್ರವೇಶ ನಿಯಮಗಳನ್ನು ಬದಲಾಯಿಸುವ ಹೊಸ ಪ್ರಸ್ತಾವನೆಗೆ ಈಗ ಚಾಲ್ತಿಯಲ್ಲಿರುವ ಐದು ವರ್ಷಗಳ ಸಮಗ್ರ ಕನ್ನಡ ಪಂಡಿತ ಕೋರ್ಸ್ ನಿಯಮಾವಳಿಯನ್ನು ಪರಿಷ್ಕರಿಸುವ/ತಿದ್ದುಪಡಿಗಳ ಅಗತ್ಯವಿರುವುದರಿಂದ. ಅದರಂತೆ ಪರಿನಿಯಮಗಳನ್ನು ರಚಿಸಿಕೊಳ್ಳುವ ಕುರಿತು ಹಾಗೂ ಹೆಸರು ಮತ್ತು ಶೈಕ್ಷಣಿಕ/ಕಾರ್ಯಚಟುವಟಿಕೆಗಳ ಬದಲಾವಣೆಗೆ ವಿಶ್ವವಿದ್ಯಾನಿಲಯದಿಂದ ಸಿಂಡಿಕೇಟ್ ಮೂಲಕ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ತತ್ಸಂಬಂಧ ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಸದರಿ ಕೋರ್ಸಿನ ಅಧ್ಯಯನ ಮಂಡಳಿಯವರು ಸಲ್ಲಿಸಿರುವ Programme Structure ನ ಅನುಮೋದನೆ ಕೋರಿ ಈ ಕಚೇರಿ ಪತ್ರ ಸಂಖ್ಯೆ:ತುವಿ:ಶೈವಿ:2022–23:3169 ದಿನಾಂಕ 15.09.2022 ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸದರಿ ಕೋರ್ಸಿನ ಅಧ್ಯಯನ ಮಂಡಳಿಯವರು ಸಲ್ಲಿಸಿರುವ Programme Structure ನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | **2022-23:ವಿವಿಪ:01:ಶೈವಿ:08:ದಿನಾಂಕ:17.01.2023** |
|---|---|

**ವಿಷಯ : ವಿವಿಧ ಸ್ನಾತಕ ಪದವಿ ಕೋರ್ಸುಗಳ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳುವ ಕುರಿತು.**

*****

ವಿವಿಧ ಸ್ನಾತಕ ಪದವಿ ಕೋರ್ಸುಗಳ 3 ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಶೈವಿ:2022-23/2946 ದಿನಾಂಕ 29.08.2022 ರ ಸೂಚನೆ ಅನ್ವಯ ಸಿದ್ಧಪಡಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಎಲ್ಲಾ ಸ್ನಾತಕ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳಿಗೆ ಸೂಚಿಸಲಾಗಿತ್ತು. ತತ್ಸಂಬಂಧ ಕೆಳಕಂಡ ಕೋಷ್ಟಕದಲ್ಲಿರುವ 3 ಮತ್ತು 4ನೇ ಸೆಮಿಸ್ಟರ್‌ನ ಕೆಲವು ಸ್ನಾತಕ ಪದವಿ ಕೋರ್ಸುಗಳ ಪಠ್ಯಕ್ರಮಗಳನ್ನು ಸಕ್ಷಮ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ 2022-23ನೇ ಸಾಲಿನಿಂದಲೇ ಅಳವಡಿಸಿಕೊಳ್ಳಲು ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಶೈವಿ:2022-23/3294 ದಿನಾಂಕ 21.09.2022 ರಂದು ಅಧಿಸೂಚಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ಸ್ವೀಕೃತವಾದ ಎಲ್ಲಾ ಕಾರ್ಯಕ್ರಮಗಳ ಪರಿಷ್ಕೃತ ವಿನ್ಯಾಸದನ್ವಯ 2022-23ನೇ ಸಾಲಿನ ವಿವಿಧ ಸ್ನಾತಕ ಪದವಿಗಳ 3 ಮತ್ತು 4ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಪರಿಷ್ಕರಿಸಿ ಸಲ್ಲಿಸುವಂತೆ ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಶೈವಿ:2022-23/3877 ದಿನಾಂಕ 14.11.2022 ರಲ್ಲಿ ಸೂಚಿಸಲಾಗಿತ್ತು. ತತ್ಸಂಬಂಧ ಕೆಳಕಂಡ ಕೋಷ್ಟಕದಲ್ಲಿರುವ ಕೋರ್ಸುಗಳ ಪಠ್ಯಕ್ರಮಗಳನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ 2022-23ನೇ ಸಾಲಿನಿಂದಲೇ ಅಳವಡಿಸಿಕೊಳ್ಳಲು ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಶೈವಿ:2022-23/4815 ದಿನಾಂಕ 06.01.2023 ರಂದು ಅಧಿಸೂಚಿಸಲಾಗಿರುತ್ತದೆ.

| ಕ್ರ.ಸಂ | ಸ್ನಾತಕ ಪದವಿ ಕೋರ್ಸುಗಳು |
|---|---|
| 1 | ಸ್ನಾತಕ ಸಸ್ಯಶಾಸ್ತ್ರ |
| 2 | ಸ್ನಾತಕ ಜೀವರಸಾಯನಶಾಸ್ತ್ರ |
| 3 | ಸ್ನಾತಕ ಜೈವಿಕತಂತ್ರಜ್ಞಾನ |
| 4 | ಸ್ನಾತಕ ಭೌತಶಾಸ್ತ್ರ |
| 5 | ಸ್ನಾತಕ ಪರಿಸರ ವಿಜ್ಞಾನ |
| 6 | ಸ್ನಾತಕ ಬಿ.ಸಿ.ಎ ಮತ್ತು ಗಣಕವಿಜ್ಞಾನ |
| 7 | ಸ್ನಾತಕ ಪತ್ರಿಕೋದ್ಯಮ |
| 8 | ಸ್ನಾತಕ ಇಂಗ್ಲಿಷ್ |
| 9 | ಸ್ನಾತಕ ಸಮಾಜಶಾಸ್ತ್ರ |
| 10 | ಸ್ನಾತಕ ವಾಣಿಜ್ಯಶಾಸ್ತ್ರ |
| 11 | ಸ್ನಾತಕ ಬಿ.ಬಿ.ಎ |

(ಪು.ತಿ.ನೋ)

| | |
|---|---|
| 12 | ಸಂಸ್ಕೃತ |
| 13 | ಮಹಿಳಾ ಅಧ್ಯಯನ |
| 14 | ಸ್ನಾತಕ ಇತಿಹಾಸ |
| 15 | ಸ್ನಾತಕ ಅರ್ಥಶಾಸ್ತ್ರ |
| 16 | ಸ್ನಾತಕ ರಾಜ್ಯಶಾಸ್ತ್ರ |
| 17 | ಸ್ನಾತಕ ಮನ:ಶಾಸ್ತ್ರ |
| 18 | ಸ್ನಾತಕ ಸಮಾಜಕಾರ್ಯ |
| 19 | ಸ್ನಾತಕ ಭೂಗೋಳಶಾಸ್ತ್ರ |
| 20 | ಸ್ನಾತಕ ರಸಾಯನಶಾಸ್ತ್ರ |
| 21 | ಸ್ನಾತಕ ಗಣಿತಶಾಸ್ತ್ರ |
| 22 | ಸ್ನಾತಕ ಪ್ರಾಣಿಶಾಸ್ತ್ರ |
| 23 | ಸ್ನಾತಕ ವಿದ್ಯುನ್ಮಾನ |
| 24 | ಸ್ನಾತಕ ಸೂಕ್ಷ್ಮಜೀವಶಾಸ್ತ್ರ |
| 25 | ಸ್ನಾತಕ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ |
| 26 | ಸ್ನಾತಕ ಹಿಂದಿ |
| 27 | ಸ್ನಾತಕ ರೇಷ್ಮೆ ಕೃಷಿ |
| 28 | Digital Fluency |
| 29 | Artificial Intelligence |
| 30 | Rovers and Rangers and Scouts and Guides |
| 31 | Value Based Skill Enhacement Courses |

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23:ವಿಪಿಪ:01:ಶೈವಿ:09:ದಿನಾಂಕ:17.01.2023 |
|---|---|

ವಿಷಯ: ವಿವಿಧ ಸ್ನಾತಕ ಪದವಿಗಳ 3 ಮತ್ತು 4ನೇ ಸೆಮಿಸ್ಟರ್‌ಗಳ Programme Structure ಕುರಿತು.

*****

ವಿವಿಧ ಸ್ನಾತಕ ಪದವಿಗಳ 2022–23 ನೇ ಸಾಲಿನ 3 ಮತ್ತು 4ನೇ ಸೆಮಿಸ್ಟರ್‌ಗಳ ಎಲ್ಲಾ ಕಾರ್ಯಕ್ರಮಗಳ ಕಾರ್ಯಕ್ರಮಗಳ ವಿನ್ಯಾಸವನ್ನು (Programme Structure) ಈಗಾಗಲೇ ಅಧಿಸೂಚಿಸಲಾಗಿರುತ್ತದೆ. ಪ್ರಸ್ತುತ, ವಿವಿಧ ಸ್ನಾತಕ ಪದವಿಗಳ 2022–23ನೇ ಸಾಲಿನ 3 ಮತ್ತು 4ನೇ ಸೆಮಿಸ್ಟರ್‌ಗಳ ಎಲ್ಲಾ ಕಾರ್ಯಕ್ರಮಗಳ ವಿನ್ಯಾಸವನ್ನು (Programme Structure) ಅಳವಡಿಸಿಕೊಳ್ಳುವ ಸಂಬಂಧ ಸಂಖ್ಯೆ:ತುವಿ:ಶೈವಿ:2022–23:3878 ದಿನಾಂಕ 14.11.2022 ರಂದು ಸಕ್ಷಮ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸುತ್ತೋಲೆ ಹೊರಡಿಸಲಾಗಿರುತ್ತದೆ.

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23:ವಿವಿಪ:01:ಶೈವಿ:10:ದಿನಾಂಕ:17.01.2023 |
|---|---|

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು.

ಉಲ್ಲೇಖ:
1) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:4559 ದಿನಾಂಕ: 19.12.2022
2) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:2788 ದಿನಾಂಕ: 18.08.2022
3) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:3603 ದಿನಾಂಕ: 13.10.2022
4) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:2789 ದಿನಾಂಕ: 18.08.2022
5) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:3014 ದಿನಾಂಕ: 24.08.2022
6) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:3328 ದಿನಾಂಕ: 22.09.2022
7) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:4582 ದಿನಾಂಕ: 19.12.2022
8) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:4677 ದಿನಾಂಕ: 27.12.2022
9) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:2888 ದಿನಾಂಕ: 22.08.2022
10) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:3256 ದಿನಾಂಕ: 17.09.2022
11) ಸಂಖ್ಯೆ:ತು.ವಿ.:ಶೈ.ವಿ.:ಸ್ನಾತಕ.ಅ.ಮಂ:2022–23:4838 ದಿನಾಂಕ: 09.01.2023

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆಳಕಂಡ ಸ್ನಾತಕ ವಿಷಯಗಳ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ಉಲ್ಲೇಖಿತ ಅಧಿಸೂಚನೆಗಳನ್ವಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 33ರಡಿಯಲ್ಲಿ ಅಧಿಸೂಚಿಸಿದ ದಿನಾಂಕದಿಂದ ಮುಂದಿನ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಈಗಾಗಲೇ ರಚಿಸಿ ಅಧಿಸೂಚಿಸಲಾಗಿರುತ್ತದೆ, ವಿವರ ಈ ಕೆಳಕಂಡಂತಿದೆ:

## ಸ್ನಾತಕ ಪದವಿ ಮೌಲ್ಯಾಧಾರಿತ ಪತ್ರಿಕೆಗಳ ಅಧ್ಯಯನ ಮಂಡಳಿ ವಿವರ:–

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಪ್ರೊ. ಕೇಶವ<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ,<br>ತು.ವಿ.ತು | ಪ್ರೊ. ಪಾಟೀಲ ಮಲ್ಲಿಕಾರ್ಜುನ ಬಿ<br>ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,<br>ತು.ವಿ.ತು | ಪ್ರೊ. ಪರಶುರಾಮ ಕೆ.ಜಿ<br>ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು | ಪ್ರೊ. ಎನ್.ಎಸ್. ಗುಂಡೂರ್<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ,<br>ತು.ವಿ.ತು | ಪ್ರೊ. ಅಣ್ಣಮ್ಮ<br>ಪ್ರಾಧ್ಯಾಪಕರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ,<br>ತು.ವಿ.ತು |
| | ಡಾ. ರೂಪೇಶ್ ಕುಮಾರ್ ಎ<br>ಸಹಾಯಕ ಪ್ರಾಧ್ಯಾಪಕರು,<br>ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು | ಡಾ. ಪದ್ಮನಾಭ ಕೆ.ವಿ<br>ಸಹಾಯಕ ಪ್ರಾಧ್ಯಾಪಕರು,<br>ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು | ಡಾ. ಮಂಗಳಗೌರಿ ಎಂ<br>ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ತು.ವಿ.ತು | |

## ಸ್ನಾತಕ ಪದವಿ ಪರಿಷ್ಕೃತ ಅರ್ಥಶಾಸ್ತ್ರ ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | | | |
|---|---|---|---|---|---|---|
| ಡಾ. ವಿಲಾಸ್ ಎಂ ಕಾದ್ರೋಳಕರ್ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು | ಶ್ರೀ ಅಮರನಾರಾಯಣ ಸ್ವಾಮಿ ಎಸ್.ವಿ ಸಹಪ್ರಾಧ್ಯಾಪಕರು ಅರ್ಥಶಾಸ್ತ್ರ ವಿಭಾಗ, ಶ್ರೀ ಸಿದ್ಧಾರ್ಥ ಪ್ರ.ದ. ಕಾಲೇಜು, ತುಮಕೂರು | ಶ್ರೀ ಹೆಚ್.ಆರ್. ಧನಂಜಯ ಸಹಪ್ರಾಧ್ಯಾಪಕರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರ.ದ.ಕಾಲೇಜು, ತಿಪಟೂರು | ಶ್ರೀ ಚಂದ್ರಶೇಖರ್ ಕೆ.ಎಸ್ ಸಹಪ್ರಾಧ್ಯಾಪಕರು, ಸರ್ಕಾರಿ ಪ್ರ.ದ.ಕಾಲೇಜು, ತಿಪಟೂರು | ಶ್ರೀ ಸಿದ್ದೇಶ್ವರ ಎನ್ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರ.ದ.ಕಾಲೇಜು, ಬೆಳ್ಳಾವಿ | ಶ್ರೀ ಮಹದೇವ ಸ್ವಾಮಿ ಎನ್.ಎಸ್ ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಸಂಜೆ ಕಾಲೇಜು, ತುಮಕೂರು | ಶ್ರೀ ಗೋವಿಂದ ರಾಜು ಎನ್ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರ.ದ.ಕಾಲೇಜು ಶಿರಾ |

## ಸ್ನಾತಕ Scouts and Guides (Rovers and Rangers) ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಡಾ. ಅರುಣ್ ಕುಮಾರ್ ಡಿ.ಬಿ ಸಹಾಯಕ ಪ್ರಾಧ್ಯಾಪಕರು, ಸ್ನಾತಕ ರಸಾಯನಶಾಸ್ತ್ರ ವಿಭಾಗ, ವಿ.ವಿ. ವಿಜ್ಞಾನ ಕಾಲೇಜು, ತು.ವಿ.ತು. | ಡಾ. ವಿಜಯಕುಮಾರಿ ಟಿ.ಆರ್ ಸಹಪ್ರಾಧ್ಯಾಪಕರು, ಮನೋವಿಜ್ಞಾನ ವಿಭಾಗ, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರ.ದ.ಕಾಲೇಜು, ತಿಪಟೂರು | ಡಾ. ತಿಪ್ಪೇಸ್ವಾಮಿ ಎಂ ಸಹಪ್ರಾಧ್ಯಾಪಕರು, ಸ.ಪ್ರ.ದ.ಕಾಲೇಜು, ಕೊರಟಗೆರೆ | ಸ್ಮಿತಾ ಎಲ್ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಪ್ರ.ದ.ಕಾಲೇಜು, ತುಮಕೂರು | ಡಾ. ರೇಣುಕಾ ಪ್ರಸಾದ್ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ್ರ.ದ.ಕಾಲೇಜು, ತಿಪಟೂರು |
| | ಶ್ರೀ ಮಲ್ಲೇಶಪ್ಪ ಟಿ.ಎಸ್ ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು | | --- | |

## ಸ್ನಾತಕ ಪದವಿ ಪರಿಷ್ಕೃತ ಪತ್ರಿಕೋದ್ಯಮ ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | |
|---|---|---|---|
| ಡಾ. ಪದ್ಮನಾಭ ಕೆ.ವಿ ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ವಿಭಾಗ, ವಿ.ವಿ. ಕಲಾ ಕಾಲೇಜು, ತು.ವಿ.ತು | ಶ್ರೀ ಸಿ. ದೇವರಾಜು ಉಪನ್ಯಾಸಕರು, ಪತ್ರಿಕೋದ್ಯಮ ವಿಭಾಗ,ಸರ್ಕಾರಿ ಪ್ರ.ದ. ಕಾಲೇಜು, ತಿಪಟೂರು | ಶ್ರೀಮತಿ ಕೋಕಿಲ ಎಂ.ಎಸ್ ಉಪನ್ಯಾಸಕರು, ಪತ್ರಿಕೋದ್ಯಮ ವಿಭಾಗ, ವಿ.ವಿ. ಕಲಾ ಕಾಲೇಜು, ತು.ವಿ.ತು | ಶ್ರೀ ಶಂಕರಪ್ಪ ಎಚ್.ಎನ್ ಉಪನ್ಯಾಸಕರು, ಪತ್ರಿಕೋದ್ಯಮ ವಿಭಾಗ, ಸರ್ಕಾರಿ ಪ್ರ.ದ.ಕಾಲೇಜು, ತಿಪಟೂರು |

## ಸ್ನಾತಕ ಪದವಿ ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | |
|---|---|---|
| ಪ್ರೊ. ಅಣ್ಣಮ್ಮ ಪ್ರಾಧ್ಯಾಪಕರು, ಡಾ.ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತು.ವಿ.ತು | ಶ್ರೀ ವಿಜಯಕುಮಾರ್ ಹೆಚ್ ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ತುಮಕೂರು | ಶ್ರೀಮತಿ ವಸಂತಮ್ಮ ಕೆ.ಎಂ ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಲಿಂಗೇಶ್ವರ ಬಿ.ಎ. ಇಂಟಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜು, ತುಮಕೂರು |

## ಸ್ನಾತಕ ಪದವಿ ಪರಿಷ್ಕೃತ ಕನ್ನಡ ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಡಾ. ಅಣ್ಣಮ್ಮ ಪ್ರಾಧ್ಯಾಪಕರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತು.ವಿ.ತು | ಡಾ. ನಿತ್ಯಾನಂದ ಬಿ. ಶೆಟ್ಟಿ ಪ್ರಾಧ್ಯಾಪಕರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತು.ವಿ.ತು | ಡಾ. ನರಸಿಂಹಪ್ಪ ಸಹಪ್ರಾಧ್ಯಾಪಕರು, ಸರ್ಕಾರಿ ಪ್ರ.ದ. ಕಾಲೇಜು, ಗುಬ್ಬಿ | ಡಾ. ಬಾಳಪ್ಪ ಎ.ಬಿ ಸಹಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ | ಡಾ. ಓ ನಾಗರಾಜು ಸಹಪ್ರಾಧ್ಯಾಪಕರು, ಸರ್ಕಾರಿ ಪ್ರ.ದ.ಕಾಲೇಜು, ಕೊರಟಗೆರೆ |
| | ಡಾ. ನಳಿನ ಎನ್ ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಪ್ರ.ದ.ಕಾಲೇಜು, ತುಮಕೂರು | | --- | |

## ಸ್ನಾತಕ ಪದವಿ ಪರಿಷ್ಕೃತ ದೈಹಿಕ ಶಿಕ್ಷಣ ಮತ್ತು ಕ್ರೀಡೆ ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಡಾ. ಎ.ಎಂ ಮಂಜುನಾಥ ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು, ವಿ.ವಿ. ವಿಜ್ಞಾನ ಕಾಲೇಜು, ತು.ವಿ.ತು | ಶ್ರೀ ಸುದೀಪ್ ಕುಮಾರ್ ಆರ್ ಸಂಯೋಜಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗ, ತು.ವಿ.ತು ದೈಹಿಕ ಶಿಕ್ಷಣ ಸಹಾಯಕ ನಿರ್ದೇಶಕರು, ವಿ.ವಿ. ಕಲಾ ಕಾಲೇಜು, ತು.ವಿ.ತು | ಡಾ. ಸೋಮಶೇಖರ್ ಆರ್ ದೈಹಿಕ ಶಿಕ್ಷಣ ನಿರ್ದೇಶಕರು, ಸ.ಪ್ರ.ದಕಾ, ತುರುವೇಕೆರೆ | ಶ್ರೀ ಶೈಲೇಂದ್ರ ಕುಮಾರ್ ಎಸ್.ಜೆ ದೈಹಿಕ ಶಿಕ್ಷಣ ನಿರ್ದೇಶಕರು, ಸ.ಪ್ರ.ದ.ಕಾಲೇಜು ಚಿಕ್ಕನಾಯಕನಹಳ್ಳಿ | ಶ್ರೀ ಶ್ರೀನಿವಾಸ ಟಿ ದೈಹಿಕ ಶಿಕ್ಷಣ ನಿರ್ದೇಕರು, ಸ.ಪ್ರ.ದ.ಕಾಲೇಜು, ಬೆಳ್ಳಾವಿ |

## ಸ್ನಾತಕ N.S.S ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | ಸಂಚಾಲಕರು |
|---|---|---|---|---|
| ಡಾ. ಮೌನೇಶ್ವರ ಶ್ರೀನಿವಾಸ ರಾವ್ ಸಹಾಯಕ ಪ್ರಾಧ್ಯಾಪಕರು, ಸ್ನಾತಕ ರಾಜ್ಯಶಾಸ್ತ್ರ ವಿಭಾಗ, ವಿ.ವಿ. ಕಲಾ ಕಾಲೇಜು, ತು.ವಿ.ತು | ಡಾ. ಕರಿಯಣ್ಣ ಬಿ ಪ್ರಾಂಶುಪಾಲರು, ವಿ.ವಿ. ಕಲಾ ಕಾಲೇಜು, ತು.ವಿ.ತು | ಡಾ. ಗೌಡರ್ ಶಿವಣ್ಣ ಮಾಜಿ ಎನ್.ಎಸ್.ಎಸ್ ಸಂಯೋಜಕರು, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ | ಡಾ. ಆರ್.ಎಂ. ಜಗದೀಶ ಸಹಪ್ರಾಧ್ಯಾಪಕರು, ಕಮಲ ನೆಹರೂ ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜು, ಶಿವಮೊಗ್ಗ | ಡಾ. ಮಂಗಳಗೌರಿ ಎಂ ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ತು.ವಿ.ತು |

## ಸ್ನಾತಕ ಪದವಿ ವ್ಯವಹಾರ ಆಡಳಿತ (ಬಿ.ಬಿ.ಎ) ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಪ್ರೊ. ನೂರ್ ಅಫ್ಜಾ<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ವ್ಯವಹಾರ ಆಡಳಿತ ಅಧ್ಯಯನ ಮತ್ತು ಸಂಶೋಧನಾ ವಿಭಾಗ,<br>ತುಮಕೂರು ವಿಶ್ವವಿದ್ಯಾನಿಲಯ,<br>ತುಮಕೂರು | ಶ್ರೀ. ಎಸ್.ಎಸ್<br>ಮಲ್ಲಿಕಾರ್ಜುನ ಪ್ರಸನ್ನ<br>ಸಹ ಪ್ರಾಧ್ಯಾಪಕರು,<br>ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು,<br>ತಿಪಟೂರು | ಶ್ರೀ. ನಾಗರಾಜ<br>ಸಹಾಯಕ ಪ್ರಾಧ್ಯಾಪಕರು,<br>ವಾಣಿಜ್ಯಶಾಸ್ತ್ರ ವಿಭಾಗ,<br>ಸ.ಪ್ರ.ದ. ಮಹಿಳಾ ಕಾಲೇಜು,<br>ತುಮಕೂರು | ಶ್ರೀ ರಮೇಶ ಕೆ.ವಿ<br>ಸಹಾಯಕ ಪ್ರಾಧ್ಯಾಪಕರು,<br>ವಾಣಿಜ್ಯಶಾಸ್ತ್ರ ವಿಭಾಗ,<br>ಸ.ಪ್ರ.ದ.ಕಾ, ಕುಣಿಗಲ್ | ಮಾಯಾ ಸಾರಾಂಗಪಾಣಿ<br>ಸಹಾಯಕ ಪ್ರಾಧ್ಯಾಪಕರು,<br>ವಾಣಿಜ್ಯಶಾಸ್ತ್ರ ವಿಭಾಗ,<br>ಸ.ಪ್ರ.ದ.ಕಾ, ಕುಣಿಗಲ್ |
| | ಶ್ರೀ. ಚಂದ್ರಮೌಳಿ<br>ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | | --- | |

## ಸ್ನಾತಕ ಪದವಿ ಗಣಿತಶಾಸ್ತ್ರ ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಡಾ. ಪಾಟೀಲ್<br>ಮಲ್ಲಿಕಾರ್ಜುನ ಬಿ<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ<br>ತು.ವಿ.ತುಮಕೂರು | ಡಾ. ಜಯಪ್ರಕಾಶ ಪಿ.ಸಿ<br>ಸಹಾಯಕ ಪ್ರಾಧ್ಯಾಪಕರು,<br>ಗಣಿತಶಾಸ್ತ್ರ ವಿಭಾಗ,<br>ಸ.ಪ್ರ.ದ ಮಹಿಳಾ ಕಾಲೇಜು,<br>ತುಮಕೂರು, ದೂರವಾಣಿ | ಡಾ. ವಸಂತ ಕುಮಾರಿ ಟಿ.ಎನ್<br>ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ ಕಾಲೇಜು, ತುಮಕೂರು | ಶ್ರೀ ನಾಗೇಂದ್ರಪ್ಪ ಜಿ<br>ಸಹಾಯಕ ಪ್ರಾಧ್ಯಾಪಕರು,<br>ಗಣಿತಶಾಸ್ತ್ರ ವಿಭಾಗ, ಸ.ಪ್ರ.ದ ಕಾಲೇಜು, ಕೊರಟಗೆರೆ | ಡಾ. ಸಿದ್ಧರಾಮು ಆರ್<br>ಸಹಾಯಕ ಪ್ರಾಧ್ಯಾಪಕರು,<br>ವೈ.ಇ.ಆರ್. ಸ.ಪ್ರ.ದ ಕಾಲೇಜು,<br>ಪಾವಗಡ |
| | ಡಾ. ನರಹರಿ ಎನ್<br>ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ದೂರವಾಣಿ ಸಂಖ್ಯೆ:<br>9739482878 | | | |

## ಸ್ನಾತಕ ಪದವಿ ಸಮಾಜಶಾಸ್ತ್ರ ವಿಷಯದ ಅಧ್ಯಯನ ಮಂಡಳಿ ವಿವರ:-

| ಅಧ್ಯಕ್ಷರು | ಸದಸ್ಯರು | | | |
|---|---|---|---|---|
| ಶ್ರೀ ರಾಮಾಂಜನಪ್ಪ<br>ಸಹಪ್ರಾಧ್ಯಾಪಕರು,<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್. ಪುರ | ಶ್ರೀ ರಂಗನಾಥ ಜಿ.ಟಿ<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುರುವೇಕೆರೆ | ಡಾ. ಸಿದ್ಧಗಂಗಯ್ಯ ಎಸ್.ಜಿ<br>ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,<br>ಕೊರಟಗೆರೆ | ಡಾ. ಅಶ್ಪಾಕ್ ಅಹಮದ್ ಜಿ.ಎ<br>ಸಹಾಯಕ ಪ್ರಾಧ್ಯಾಪಕರು,<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು | ಡಾ. ಸುನಿತ ವಿ. ಗಾಣಿಗರ್<br>ಸಹಾಯಕ ಪ್ರಾಧ್ಯಾಪಕರು,<br>ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ವಿ.ವಿ ಕಲಾ ಕಾಲೇಜು, ತು.ವಿ.ತು |

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ: | 2022-23:ಸಾ.ವಿ.ವಿ.ಪ: 01 ಶೈ.ವಿ:11 ದಿನಾಂಕ:17.01.2023 |
|---|---|

ವಿಷಯ: ಸ್ನಾತಕ ಶಿಕ್ಷಣ ವಿಷಯದ ಅಧ್ಯಯನ ಮಂಡಳಿಯನ್ನು ರಚಿಸಿರುವ ಕುರಿತು.
ಉಲ್ಲೇಖ: ಸಂಖ್ಯೆ: ತುವಿ:ಶೈವಿ:ಬಿ.ಇ.ಡಿ.,ಅ.ಮಂ:2022-23:4783 ದಿನಾಂಕ: 05.01.2023

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಪ್ರಕರಣ 33ರ ಅಡಿಯಲ್ಲಿ ಸ್ನಾತಕ ಶಿಕ್ಷಣ ವಿಷಯದ ಅಧ್ಯಯನ ಮಂಡಳಿಯನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದಿನಾಂಕ:05.01.2023 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ತುಮಕೂರು ವಿಶ್ವವಿದ್ಯಾನಿಲಯವು ಸ್ನಾತಕ ಶಿಕ್ಷಣ (ಬಿ.ಇಡಿ) ವಿಷಯದ ಅಧ್ಯಯನ ಮಂಡಳಿಯನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂಚಿತವಾಗಿ ಯಾವುದೋ ಘಟಿಸುವುದೋ ಅಲ್ಲಿಯವರೆಗೆ ಈಗಾಗಲೇ ರಚಿಸಿ ಅಧಿಸೂಚಿಸಲಾಗಿದ್ದು, ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.